Sri T. R. SHAMANNA.—Sir, in my constituency people have been put to lot of hardship. They are finding it very difficult to get ration cards.

Mr. DEPUTY SPEAKER.—It is in everybody's constituency and not only in yours. I would urge upon the Hon. Minister for Social Welfare and Community Development to convey the feelings of the hon. Members to the Hon. Minister concerned.

Misappropriation in supply of wood for Construction of Houses to the Poor

ಶ್ರೀ ಕೆ. ಪ್ರಭಾಕರ್.—ನಾನೂ ಸೇರಿ ನಾಲ್ಕೈದು ಜನ ರಾಜ ಹಾಕಿ ಒಂದು ಕಾರ್ ಅಟೆನ್‌ಷನ್ ನೋಟೀಸ್ ಕೊಟ್ಟು ಸಮಾರು 10 ದಿವಸವಾಗಿದೆ. ಕಳೆದ 8 ವರ್ಷದಿಂದ ಸರ್ಕಾರದವರು ಬಡವರಿಗೆ ಮನೆ ಕಟ್ಟಿಕೊಳ್ಳುವುದರ ಸಲುವಾಗಿ ಅರಣ್ಯದಿಂದ ಮರಗಳನ್ನು ಕೊಡುತ್ತಿದ್ದರು. ಅದು ದುರ್ಬಿನಿಯೋಗವಾಗುತ್ತಿದೆ ಎನ್ನುವುದರ ಬಗ್ಗೆ ಒಂದು ತನಿಖೆಗೆ ವರ್ಷಾಡು ಮಾಡಿದ್ದಾರೆ. ಅದರಿಂದ ಪ್ರಯೋಜನವಾಗುವುದಕಿಂತಲೂ ಅಪ್ರಯೋಜನ ಜಾಸ್ತಿಯಾಗಿ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ರೀತಿಯಲ್ಲಿ ಕಾರ್ಯಕ್ರಮ ನಡೆಯುತ್ತಿದೆ ಇದರ ಬಗ್ಗೆ ಸರ್ಕಾರದ ಉತ್ತರವೇನು ಎಂದು ಕೇಳುತ್ತೇನೆ. ಉತ್ತರ ಬೇಗ ಬರುವ ಹಾಗೆ ಮಾಡಿದರೆ ಸಾಕು.

Closure of the General Hostel at Hassan

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮೀ, ಈಗ್ಗೆ ಎಂಟು ದಿನಗಳ ಹಿಂದೆ ಐದಾರು ಜನ ಸದಸ್ಯರು ಸೇರಿ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕಳುಹಿಸಲಾಗಿತ್ತು. ಅದು ಹಾಸನದಲ್ಲಿದ್ದ ಒಂದು ಜನರರ್ ಹಾಸ್ಟರ್‌ನ್ನು ಮುಚ್ಚಿರುವುದರ ಬಗ್ಗೆ ಮತ್ತು ಅಲ್ಲಿದ್ದ ಮಕ್ಕಳ ಬಗ್ಗೆ ಇದರ ಬಗ್ಗೆ ಇಲಾಖೆಯವರು ಏನು ಮಾಡಿದ್ದಾರೆ ಎನ್ನುವುದು ತಿಳಿಯಲಿಲ್ಲ. ದಯವಿಟ್ಟು ನಾಳೆ ದಿನವಾದರೂ ಈ ಕಾರ್ ಅಟೆನ್‌ಷನ್ ನೋಟೀಸಿಗೆ ಉತ್ತರ ಸರಕಾರದಿಂದ ಬರುವ ಹಾಗೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Incident in South Kanara

Sri B. SUBBAIAH SHETTY(Surathkal).—Sir, I had sent along with other hon. members a Call Attention Notice about 10 days back regarding the hooliganism by R.S.S. Workers in South Kanara District intimidating the minority and other poor tenants. There is another such incident recently in South Kanara. I request that my Call Attention may be brought before the House at the earliest.

Mr. DEPUTY SPEAKER.—I will have it examined.

Re-opening the Examination Centre at Nonavinakere

ಶ್ರೀ ಟಿ. ಎಂ. ಮಂಜುನಾಥ(ತಿಪಟೂರು).—ಸ್ವಾಮೀ, ನಾನು 20 ದಿನಗಳಿಗೆ ಮುಂಚೆಯೇ ವಿದ್ಯಾ ಮಂತ್ರಿಗಳ ಕಡೆಗೆ ನೊಣವಿನಕೆರೆ ಎಸ್. ಎಸ್. ಎಲ್. ಸಿ. ಪರೀಕ್ಷಾ ಕೇಂದ್ರವನ್ನು ಮುಚ್ಚಿರುವುದರ ಬಗ್ಗೆ ನೋಟೀಸ್ ಕಳುಹಿಸಿದ್ದರೂ ಇದುವರೆಗೂ ಸರಕಾರದಿಂದ ಈ ಸಂಬಂಧವನ್ನು ಪುನ: ತೆರೆಯುತ್ತೇವೆ ಅಥವಾ ಇಲ್ಲ ಎನ್ನುವುದಕ್ಕೆ ಉತ್ತರ ಇಲ್ಲ. ಸರಕಾರದಿಂದ ಇಂದೇ ಉತ್ತರ ಕೊಡಿಸಿ